# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್.ಎಂ.ವೈ.ಎಸ್-7585/2015/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:22-6-2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಶ್ರೀ ಶ್ಯಾಮಸುಂದರ ತಂದೆ ಬಿ.ವಿ. ಶ್ರೀನಿವಾಸಮೂರ್ತಿ, ವಾಸ: ಬಾಣಾವರ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ಶ್ಯಾಮಸುಂದರ ತಂದೆ ಬಿ.ವಿ. ಶ್ರೀನಿವಾಸಮೂರ್ತಿ, ವಾಸ: ಬಾಣಾವರ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ದೊಡ್ಡನಿಂಗಪ್ಪ, ಪಿ.ಡಿ.ಓ. ಬಾಣಾವರ ಗ್ರಾಮ ಪಂಚಾಯತ್, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಮತ್ತು (2) ಖಾಸಗಿ ವ್ಯಕ್ತಿಯಾದ ಶ್ರೀ ಕೆ.ಜೆ. ಪ್ರಕಾಶ, ವಾಸ: ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಬಾಣಾವರ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಅಸೆಸ್‌ಮೆಂಟ್ ಸಂ:566/466ಸಿ ವಿಸ್ತೀರ್ಣ 40*10 ಮತ್ತು ಅಸೆಸ್‌ಮೆಂಟ್ ಸಂ:466ಸಿ ವಿಸ್ತೀರ್ಣ 9*45 ಅಡಿ ಜಾಗದಲ್ಲಿ ಗ್ರಾಮ ಪಂಚಾಯತ್‌ಗೆ ಸೇರಿದ ನಿವೇಶನಗಳಿದ್ದು, ಅದರಲ್ಲಿ 4 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದಾರೆ. 2ನೇ ಎದುರುದಾರರು ಮತ್ತು ಅವರ ಹೆಂಡತಿಯ ಹೆಸರಿನಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಕಾನೂನುಬಾಹಿರವಾಗಿ ಬಾಡಿಗೆ ಪಡೆಯುತ್ತಿದ್ದಾರೆ. ಈ ಬಗ್ಗೆ 1ನೇ ಎದುರುದಾರರಿಗೆ ಹಲವಾರು ಬಾರಿ ತೆರವುಗೊಳಿಸುವಂತೆ ಮನವಿಗಳನ್ನು ಕೊಟ್ಟರೂ ಸಹ

ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಮಾಡಿರುವ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಇ-ಜನಸ್ಪಂದನ, ಕರ್ನಾಟಕ ಸರ್ಕಾರ ಇವರ ಆದೇಶದ ನಕಲನ್ನು ಇ.ಓ. ತಾಲ್ಲೂಕು ಪಂಚಾಯತ್ ಅರಸಿಕೆರೆ ಇವರಿಗೆ ಕಳುಹಿಸಿಕೊಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ. ದೂರುದಾರರು ಸಲ್ಲಿಸಿರುವ ಅರ್ಜಿಯಲ್ಲಿ ಹಲವಾರು ಗೊಂದಲಗಳಿವೆ. ಆದ್ದರಿಂದ ತೆರವುಗೊಳಿಸಲು ಸಾಧ್ಯವಾಗುತ್ತಿಲ್ಲ ಅಂತ ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಅದರಲ್ಲಿ ವಿವಾದಿತ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಿ, ಬೆಲೆ-ಬಾಳುವ ಪಂಚಾಯತ್ ನಿವೇಶನವನ್ನು ಉಳಿಸಿಕೊಡುವಂತೆ ಕೋರಿರುತ್ತಾರೆ.

5. ಸಂಬಂಧಪಟ್ಟ ಅಧೀನ ಕಾರ್ಯದರ್ಶಿಗಳಿಗೆ ಮತ್ತು ಇ.ಓ., ತಾಲ್ಲೂಕು ಪಂಚಾಯತ್ ಅರಸಿಕೆರೆ ಇವರಿಗೆ ಪ್ರಕರಣವನ್ನು ವಹಿಸಿಕೊಡುವ ವಿಷಯದಲ್ಲಿ ಅಥವಾ ನಿವೇಶನವನ್ನು ವಾಪಸ್ಸು ಪಡೆಯುವಲ್ಲಿ ಏನು ಕ್ರಮ ಜರುಗಿಸಲಾಗಿದೆ ಅಂತ ಎದುರುದಾರರಿಂದ ವರದಿಯನ್ನು ಕೇಳಲಾಗಿದೆ. ಎದುರುದಾರರು ತಮ್ಮ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ದಿ: 2-5-2015 ರ ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಯ ನಿರ್ಣಯದಂತೆ ಫಲಾನುಭವಿಗಳಿಗೆ ನಿವೇಶನ ಮಂಜೂರು ಮಾಡಲು ಪಂಚಾಯತ್ ರಾಜ್ ಅಧಿನಿಯಮ ಕಲಂ 209 ರ ಪ್ರಕಾರ ಉಪನೊಂದಣಾಧಿಕಾರಿಗಳ ಮಾರುಕಟ್ಟೆ ಬೆಲೆಯ ದರದಲ್ಲಿ ಕಿಮ್ಮತ್ತು ಕಟ್ಟಿಸಿಕೊಂಡು ಸದರಿಯವರಿಗೆ ಮಂಜೂರು ಮಾಡಿಸಲು ಆದೇಶಿಸಿದ್ದಾರೆ. ಆದರೆ ಗ್ರಾಮ ಪಂಚಾಯತ್ ಸದಸ್ಯರು, ಬಾಣಾವರ ಗ್ರಾಮಸ್ಥರು ಮನವಿ ಸಲ್ಲಿಸಿ ಅಕ್ರಮ ನಿವೇಶನದಲ್ಲಿ ವಾಸವಾಗಿರುವವರನ್ನು ತೆರವುಗೊಳಿಸಲು ಕ್ರಮವಹಿಸಲು ಕೋರಿಕೊಂಡಿದ್ದಾರೆ. ಇದರ ಮೇಲೆ ತಾಲ್ಲೂಕು ಪಂಚಾಯತ್ ಕಾರ್ಯಾಲಯದ ಅಧಿಕಾರಿಗಳು ಕೂಡಲೇ ತೆರವುಗೊಳಿಸುವಂತೆ ಜ್ಞಾಪನ ಪತ್ರವನ್ನು ಕೊಟ್ಟಿರುತ್ತಾರೆ. 2 ಪತ್ರಗಳನ್ನು ಸಾಮಾನ್ಯ ಸಭೆಯಲ್ಲಿ ಚರ್ಚೆ ಮಾಡಲು ಇಟ್ಟಾಗ 12 ಜನ

ಸದಸ್ಯರು ಮಂಜೂರು ಮಾಡಬೇಕೆಂದು, 7 ಜನರು ಕಟ್ಟಡ ತೆರವುಗೊಳಿಸಿ ಪಂಚಾಯತ್‌ಗೆ ವಹಿಸಿಕೊಡಲು ತಿಳಿಸಿದ್ದಾರೆ. ಆದ್ದರಿಂದ ಕ್ರಮವನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿರುತ್ತಾರೆ.

6. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಕಲಂ 209 ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿಯಲ್ಲಿ ಗ್ರಾಮ ಪಂಚಾಯತಿಯು ಆಸ್ತಿಗಳನ್ನು ಅರ್ಜಿಸಬಹುದು ಮತ್ತು ಅವುಗಳನ್ನು ವಿಲೇವಾರಿ ಮಾಡಬಹುದು ಎನ್ನುವ ಬಗ್ಗೆ ಇದೆ. ಸರ್ಕಾರವು ವಿಧಿಸಿರುವ ನಿಯಮಾವಳಿಗಳಂತೆ ಮಾತ್ರ ಕ್ರಮ ಕೈಗೊಳ್ಳಲು ಪಂಚಾಯತಿಗೆ ಅಧಿಕಾರ ಇರುತ್ತದೆ. ದಿನಾಂಕ: 2-5-2016 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮಸ್ಥರ ಅರ್ಜಿಯನ್ನು ಪರಿಶೀಲಿಸಿ ಅಕ್ರಮವಾಗಿ ನಿವೇಶನ, ಮನೆ ಕಟ್ಟಿದ್ದರೆ ತೆರವುಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದ್ದಾರೆ. ದಿ: 14-7-2015 ರಂದು ಅಂದರೆ ಇದಕ್ಕೂ ಹಿಂದೆ, ದಿ: 20-1-2015 ಗ್ರಾಮ ಪಂಚಾಯತಿಯ ನಿರ್ಣಯದಂತೆ ಮಾರುಕಟ್ಟೆಯ ಧರ ಕಟ್ಟಿಸಿಕೊಂಡು ಹಾಲಿ ಅನುಭವದಾರರಿಗೆ ಮಂಜೂರು ಮಾಡಲು ಪಿ.ಡಿ.ಓ. ರವರಿಗೆ ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳಲು ಆದೇಶಿಸಿದ್ದಾರೆ. ದಿ: 2-5-2016 ರ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶವನ್ನು 1ನೇ ಎದುರುದಾರರು ಪಾಲಿಸಿಲ್ಲ. ಇದಕ್ಕೂ ಹಿಂದಿನ ಪಂಚಾಯತಿಯ ಸಭಾ ನಿರ್ಣಯದ ಪ್ರಕಾರ ಮಾರುಕಟ್ಟೆಯ ಕಿಮ್ಮತ್ತು ಕಟ್ಟಿಸಿಕೊಂಡು ನಿವೇಶನವನ್ನು ಕೊಡಬೇಕು ಎನ್ನುವ ವಿಷಯವನ್ನು ಪ್ರಧಾನವಾಗಿ ಇಟ್ಟುಕೊಂಡು ಇದರಲ್ಲಿ ಹಲವಾರು ಗೊಂದಲಗಳಿವೆ ಅಂತ ಹೇಳುತ್ತಿದ್ದಾರೆ. 1ನೇ ಎದುರುದಾರರು ತಾಲ್ಲೂಕು ಪಂಚಾಯತ್ ಬಾಣಾವರ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶವನ್ನು ಪಾಲನೆ ಮಾಡದೇ ಕರ್ತವ್ಯಲೋಪ ಎಸೆಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ. ತಾಲ್ಲೂಕು ಪಂಚಾಯತ್ ಅಧಿಕಾರಿಗಳ ನಿರ್ದೇಶನದಂತೆ ಯಾವುದೇ ಸಭೆ ಕರೆಯದೇ, ಸಭೆಯ ಮುಂದೆ ಅನಧಿಕೃತ ಕಟ್ಟಡದ ವಿಷಯವನ್ನು ಸಹ ಮಂಡಿಸದೇ ಕರ್ತವ್ಯಲೋಪ ಎಸೆಗಿರುತ್ತಾರೆ. ಆದ್ದರಿಂದ, 2ನೇ ಎದುರುದಾರರ ಅನಧೀಕೃತ ಕಟ್ಟಡವನ್ನು ತೆರವುಗೊಳಿಸುವ ವಿಷಯದಲ್ಲಿ ಸೂಕ್ತವಾದ ಕಾನೂನಿನ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1ನೇ ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 27/6/13.
(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.